# ವಿವೇಕಾನಂದ ಕಾಮತ್



ಸಮಕಾಲೀನ ಕನ್ನಡ ಕಾದಂಬರಿಕಾರರಲ್ಲಿ ವಿವೇಕಾನಂದ ಕಾಮತ್ ಪ್ರಮುಖರು. ಜೀವನದ ಸೂಕ್ಷ್ಮ ಸಂಗತಿಗಳನ್ನು ಜನಸಾಮಾನ್ಯರಿಗೂ ಸಂವಹನಗೊಳ್ಳುವಂತೆ ಕಾದಂಬರಿ ರಚಿಸುವಲ್ಲಿ ಅವರು ಸಿದ್ಧಹಸ್ತರು. ಮೂರು ದಶಕಗಳ ಅವಧಿಯಲ್ಲಿ ಸರಾಸರಿ ವರ್ಷಕ್ಕೆರಡರಂತೆ ಕಾದಂಬರಿ ರಚಿಸಿರುವ ಅವರು, ಕಥೆಗಾರರೂ ಹೌದು. ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮ ಪಡೆದಿರುವ ಕಾಮತರು ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕಳಸದವರು. ಪ್ರಸ್ತುತ ಮಂಗಳೂರಿನಲ್ಲಿ ನೆಲೆ ಕಂಡುಕೊಂಡಿದ್ದಾರೆ. 'ಅತಿಕ್ರಮಣ', 'ನೆಲಮುಗಿಲು', 'ಸ್ವೀಕಾರ' ಹಾಗೂ 'ಅಜ್ಞಾತ' ಕಾದಂಬರಿಗಳ ಮೂಲಕ 'ಸುಧಾ' ಓದುಗರಿಗೆ ಪರಿಚಿತರು. ಈ ವಾರದಿಂದ ಧಾರಾವಾಹಿಯಾಗಿ ಪ್ರಕಟಣೆ ಆರಂಭಿಸಿರುವ 'ಪದರುಗಳು' ಮನುಷ್ಯನ ನಿಗೂಢ ಮನಸ್ಸಿನ ಪದರುಗಳಿಗೆ ಬೆಳಕು ಹಾಯಿಸುವ ವಿಶಿಷ್ಟ ಪ್ರಯತ್ನ.

ನಿಧಿಯ ಕತೇನೆ ಮುಗೀತಿತ್ತು...' ಎಂದು ತಾನು ಕಣ್ಣಾರೆ ಕಂಡ ಸತ್ಯವನ್ನು ಅತ್ತೆ ಮಾವನ ಮುಂದೆ ಅರುಹಿದ ಪ್ರದೀಪ. ಅವನಿನ್ನೂ ಆ ಘಟನೆ ಊಹಿಸಿ ಭಯದಿಂದ ಕಂಪಿಸುತ್ತಿದ್ದ. ಅವನ ಧ್ವನಿ ನಡುಗುತ್ತಿತ್ತು.

'ನಿಮ್ಗೆಲ್ಲೋ ಅಪಾರ್ಥ ಆಗಿರಬೇಕು... ನಿವೀ ಹಾಗೆ ಮಾಡಲು ಸಾಧ್ಯವೇ ಇಲ್ಲ... ಅವ್ಳು ಯಾಕೆ ಹೀಗೆ ಮಾಡ್ತಾಳೆ..?'

'ಅದು ನನಗೂ ಗೊತ್ತಿಲ್ಲ... ಆದರೆ ನೀವು ನಿಮ್ಮ ಮಗಳ ಮೇಲಿನ ಮಮಕಾರದಿಂದ ಹೀಗೆ ಹೇಳ್ತಿದ್ದೀರಾ... ನಾನು ಕಣ್ಣಾರೆ ನೋಡಿದ್ದನ್ನು, ಪ್ರತ್ಯಕ್ಷ ಕಂಡ ಸತ್ಯವನ್ನು ಹೇಳ್ತಾ ಇದ್ದೀನಿ...'

'ಪ್ರದೀಪ... ನಾನು ನಿನ್ನ ಮಾತನ್ನು ಒಪ್ಪಲು ಸಾಧ್ಯವೇ ಇಲ್ಲ. ನನ್ನ ಮಗಳ ಮೇಲೆ ಇಂಥ ಆರೋಪ ಹೊರಿಸಬೇಡ. ಯಾರಾದರೂ ಕೇಳಿಸಿಕೊಂಡರೆ ಏನು ಹೇಳಿಯಾರು? ನಿನಗೇನಾಗಿದೆ... ನೀನು ಏನು ಹೇಳ್ತಾ ಇದ್ದಿಯಾ ಎಂಬ ಪ್ರಜ್ಞೆ ಇದೆಯೇ ನಿನಗೆ..?' ಕೇಶವರ ಸಂಯಮ ಹಾರಿ ಹೋಗಿತ್ತು. ದನಿ ನಡುಗುತ್ತಿತ್ತು. ಅಳಿಯನ ಮೇಲಿನ ಗೌರವ ಗಾಳಿಗೆ ತೂರಿಹೋಗಿತ್ತು. ಮಗಳ ಮೇಲಿನ ಅಪವಾದ ಸಹಿಸದವರಾಗಿದ್ದರು.

'ನಿಮ್ಮ ಮಗಳನ್ನು ಸಮರ್ಥಿಸಿಕೊಳ್ಳುವುದು ನಿಮಗೆ ನ್ಯಾಯವೇ... ಆದರೆ ನಾನು ಕಂಡಿದ್ದು ಸುಳ್ಳಾ?'

'ಅದು ನಮ್ಗೆ ಗೊತ್ತಿಲ್ಲ. ನೀವು ನಿವೀನ್ನ ಹೊರಗೆ ಯಾಕೆ ನಿಲ್ಲಿಸಿದ್ದೀರಾ? ಅವಳನ್ನು ಕರೆದು ಎದುರೆದುರೇ ಕೇಳಿ... ಕರೀರಿ ಅವಳನ್ನು. ಅಥವಾ ನಾವು ಬರುವುದಕ್ಕೆ ಮುಂಚೆ ಕೇಳಿದ್ರಾ...?'

'ಇಲ್ಲಾ... ನನ್ಗೂ ನಿಮ್ಮಷ್ಟೇ ಆಘಾತವಾಗಿದೆ. ಹೇಗೆ ಕೇಳಲಿ? ಯಾವ ಬಾಯಿಂದ ಕೇಳಲಿ? ಏನೆಂದು ಕೇಳಲಿ? ಅವ್ಳು ಮಾಡೋದು ಮಾಡಿ ಏನೂ ತಿಳಿಯದವಳಂತೆ ಆರಾಮಾಗಿದ್ದಾಳೆ...' ಪ್ರದೀಪ ಅಯೋಮಯ ಸ್ಥಿತಿಯಲ್ಲಿದ್ದ.

'ಅಂದರೆ... ನಿಮ್ಗೆ ಧೈರ್ಯ ಇಲ್ಲವೋ... ನಂಬಿಕೆ ಇಲ್ಲವೋ...?'

'ಎರಡೂ ಇಲ್ಲ... ಆದರೆ ನನ್ನ ಆರೋಪ ಸುಳ್ಳಲ್ಲ...'

'ಮತ್ತೆ ನಿವೀ, ಈಗ ನಾವು ಬಂದಾಗ, ನಮ್ಗೆ ಬಾಗಿಲು ತೆರೆದಾಗ ಸಹಜವಾಗಿಯೇ ಇದ್ದಾಳಲ್ಲ... ಅವಳ ಮುಖದ ಮೇಲೆ ಲವಲೇಶವೂ ಅಪರಾಧಿ ಭಾವನೆಯೇ ಇಲ್ಲ... ನೀವು ಹೇಳಿದ್ದು ನಿಜವೇ ಆಗಿದ್ದರೆ... ಪರಿಸ್ಥಿತಿ ಬೇರೆ ಇರಬೇಕಿತ್ತು ತಾನೇ? ನೀವೇನೋ ಹೇಳ್ತಿದ್ದೀರಿ... ಇಲ್ಲಿ ಪರಿಸ್ಥಿತಿ ಬೇರೇನೇ ಕಾಣ್ತಿದೆ... ನಿವೀಗೆ ಇದಾವುದೂ ತಿಳಿದೇ ಇಲ್ಲದ ಥರ ಅವಳ ವರ್ತನೆ ಇದೆ' ಎಂದ ಕೇಶವರು ದನಿ ಏರಿಸಿದರು, 'ಪ್ರದೀಪ... ನಿಜ ಹೇಳು... ಏನು ವಿಷ್ಯ...? ಯಾಕೆ ಇದೆಲ್ಲಾ ಮಾಡ್ತಿದ್ದ್ಯಾ...? ನೀನು ಸಭ್ಯ, ಒಳ್ಳೇ ಮನೆತನದವನು ಅಂತ ನಿನ್ಗೆ ಮಗಳನ್ನು ಕೊಟ್ಟಿದ್ದೀನಿ. ನಂಬಿಕೆ ದ್ರೋಹ ಮಾಡಬೇಡ. ಬೇರೇನಾದರೂ ವಿಷ್ಯ ಇದೆಯಾ... ನೇರವಾಗಿ ಹೇಳು... ಇದೆಲ್ಲಾ ಅಡ್ಡ ಹಾದಿ ಬೇಡ. ನಿನ್ನ ಅಪವಾದವನ್ನು ಸಹಿಸುವ ಶಕ್ತಿ ನಮಗಿಲ್ಲ...' ದುಗುಡದಿಂದ ಕೇಶವರ ದನಿ ಭಾರವಾಯಿತು.

'ಇಲ್ಲಾ ಮಾವ... ನನಗೆ ಇಂಥ ಮಾತು ಆಡೋಕೆ ಎಷ್ಟು ಕಷ್ಟ ಆಯಿತು ಅಂತ ನನಗಷ್ಟೇ ಗೊತ್ತು. ಅದನ್ನ ಕೇಳೋಕೆ ನಿಮ್ಗೆ ಇನ್ನೂ ಕಷ್ಟ ಅಂತನೂ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಯಾರು ನನ್ನ ಮಾತನ್ನ ನಂಬಲ್ಲ. ಆದರೆ ಸತ್ಯ ಯಾವತ್ತೂ ಸತ್ಯ. ನಾನು ಹೇಳೋದು ಸತ್ಯ ಮಾವ. ನಿವೇದಿತಾ ನಿಧೀನ್ನ ಕೊಲ್ಲುವ ಪ್ರಯತ್ನ ಮಾಡಿದ್ದು ನಿಜ. ಅದಕ್ಕೇ ನಿಮ್ಮನ್ನ ಕರೆಸಿಕೊಂಡಿದ್ದು. ನೀವು ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ವಿಚಾರಿಸಿ. ನಾನು ಅವಳ ಬಳಿ ಈ ವಿಚಾರ ಮಾತನಾಡಲಾರೆ. ನಾನು ಅಪಾರವಾಗಿ ಪ್ರೀತಿಸುತ್ತಿದ್ದ ನಿವಿಯ ಇನ್ನೊಂದು ಮುಖ ಕಂಡ ಮೇಲೆ ನನಗೆ ಆಘಾತ–ನೋವು ಎರಡೂ ಆಗಿದೆ. ಅವ್ಳನ್ನ ನಾನು ಎದುರಿಸಲಾರದವನಂತಾಗಿದ್ದೀನಿ. ಅವ್ಳ ಮುಖ ಕಂಡರೆ ಆ ದೃಶ್ಯವೇ ನನ್ನ ಕಣ್ಮುಂದೆ ಬರುತ್ತೆ. ಮೈ ನಡುಕ ಬರುತ್ತದೆ. ಅದಕ್ಕೇ ನಿಮ್ಗೆ ಅವ್ಳನ್ನ ಕರ್ಕೊಂಡು ಹೋಗಿ ಅಂದಿದ್ದು...'

ಇವರು ಮಾತನಾಡುತ್ತಿದ್ದಂತೆ ಪ್ರದೀಪನ ಮಡಿಲಲ್ಲಿದ್ದ ನಿಧಿ ಅಳಲು ಶುರುವಿಟ್ಟುಕೊಂಡಿತು. ಪ್ರದೀಪ ಎಷ್ಟೇ ರಮಿಸುವ ಯತ್ನ ಮಾಡಿದರೂ ನಿಧಿ ಅಳು ನಿಲ್ಲಿಸಲಿಲ್ಲ. ವೀಣಾ ಬಂದು ಅಳಿಯನ ಕೈಯಿಂದ ಮೊಮ್ಮಗಳನ್ನೆತ್ತಿಕೊಂಡು ಸಂತೈಸುವ ಪ್ರಯತ್ನ ಮಾಡಿದರು. ನಿಧಿ ಒಂದೇ ಸಮನೇ ರಚ್ಚೆ ಹಿಡಿದಾಗ, 'ಅವ್ಳಿಗೆ ಹಸಿವಾಗಿರಬೇಕು... ನಿವೀಗೆ ಹಾಲು ಕೊಡಲು ಹೇಳ್ತೀನಿ...' ಎಂದಾಗ ಪ್ರದೀಪ ಸೀಟಿನಿಂದ ದಢಕ್ಕನೆ ಎದ್ದುಕೊಂಡು ಬಂದು ನಿಧಿಯನ್ನು ಪಡೆದುಕೊಂಡ, 'ಬೇಡ... ಬೇಡ... ಅವ್ಳ ಕೈಗೆ ಮಗುವನ್ನು ಕೊಡಲ್ಲ ನಾನು... ಅವ್ಳೇನಾದರೂ ಮಾಡಿ ಬಿಡ್ತಾಳೆ...' ಕೇಶವರು ಸಹಿಸಲಾರದವರಂತೆ ಮುಖ ಕಿವುಚಿ, 'ಸಾಕು ಮಾಡು ಪ್ರದೀಪ್... ನಾವೂ ಆಗ್ಲಿಂದ ಕೇಳ್ತಾನೆ ಇದ್ದೀವಿ... ನಮ್ಮ ಸಹನೆಗೂ ಮಿತಿ ಇದೆ. ನೀನು ಅದೇನು ನೋಡಿದ್ಯೋ... ಅದೇನು ಅರ್ಥ ಮಾಡಿಕೊಂಡೆಯೋ... ಯಾವುದೇ ಘಟನೆಯಿರಲಿ, ನಾವು ಯಾವ ದೃಷ್ಟಿಕೋನದಿಂದ ಅದನ್ನು ನೋಡ್ತೀವೋ... ಏನು ಭಾವನೆ ಮನಸಲ್ಲಿಟ್ಟುಕೊಂಡು ನೋಡ್ತೀವೋ, ಅದೇ ದೃಶ್ಯ ನಮಗೆ ಕಾಣೋದು... ಋಣಾತ್ಮಕವಾಗಿ ನೋಡಿದರೆ ಯಾವ ಘಟನೆಯಾದರೂ, ತಪ್ಪಾಗಿಯೇ ಕಾಣುತ್ತದೆ... ಹೆಣ್ಣುಮಗು ಹುಟ್ಟಿದೆ ಅಂತ ನಿನ್ಗೆ ಅಸಮಾಧಾನ ಇರಬೇಕು. ಅದಿಕ್ಕೇ ನನ್ನ ಮಗಳ ಮೇಲೆ ಇಲ್ಲಸಲ್ಲದ ಅಪವಾದ ಹಾಕ್ತಾ ಇದ್ದೀಯಾ? ನೀನು ಹೇಳಿದ್ದನ್ನು ನಾನು ನಂಬಬೇಕಾ?' ಕೇಶವರ ದನಿ ಏರಿತು.

ಅವರ ಆಪಾದನೆ ಕೇಳಿ ಪ್ರದೀಪ ಹೌಹಾರಿದ, 'ಮಾವ... ಏನು ಹೇಳ್ತಾ ಇದ್ದೀರಾ ನೀವು? ನನ್ಗೆ ಹೆಣ್ಣುಮಗು ಬೇಡವಾಗಿತ್ತಾ? ಇನ್‌ಫ್ಯಾಕ್ಟ್... ಹೆಣ್ಣುಮಗುವೇ ಬೇಕು ಅಂತ ತುಂಬಾ ಆಸೆ ಪಟ್ಟೋನು ನಾನು. ಹಾಗೆ ನೋಡಿದರೆ ನಿವಿಗೆ ಗಂಡುಮಗು ಬೇಕೆಂದು ಆಸೆ ಇತ್ತು. ನಿಧಿ ಹುಟ್ಟಿದಾಗ ಕಂಪನಿ ಸ್ಟಾಫ್‌ಗೆ ಸ್ವೀಟ್ಸ್ ಹಂಚಿದೀನಿ ಗೊತ್ತಾ? ನೀವು ಹೀಗೆ ವೃಥಾ ನನ್ನ ಮೇಲೆ ಆರೋಪ ಹೊರಿಸಬೇಡಿ...' ಅವರು ಮಾಡಿದ ಆಪಾದನೆಯಿಂದ ತತ್ತರಿಸಿ ಹೋದ ಪ್ರದೀಪ.

'ಮತ್ತೆ ನೀನು ಹೊರಿಸಿದ ಆರೋಪ ನಾವು ಹೇಗೆ ಸಹಿಸಬಲ್ಲೆವು? ನಿವೀಗೆ ಗೊತ್ತಾದರೆ ಅವಳು ಎಷ್ಟು ಬೇಜಾರು ಮಾಡಿಕೊಳ್ಳಬಹುದು? ಮಾತು ಎಲ್ಲೆಲ್ಲಿಗೋ ಹೋಗಿ ಮನಸ್ಸು ಕಹಿ ಮಾಡುತ್ತೆ, ಸಂಬಂಧಗಳಲ್ಲಿ ವಿಷ ಬೆರೆಯುವಂತೆ ಮಾಡುತ್ತೆ. ಈ ಸಂಗತಿಯನ್ನು ಇಲ್ಲಿಗೇ ಬಿಟ್ಟು ಬಿಡೋಣ. ಈ ಮುಚ್ಚಿದ ಬಾಗಿಲಿನಿಂದ ಆಚೆ ಹೋಗೋದು